ಅ) ಮತ್ತು ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತುಮಕೂರು ಜಿಲ್ಲೆಯ ರೈತರಿಗೆ ಬೇಸಾಯಕ್ಕೆ ಬೇಕಾಗುವ ವಿದ್ಯುಚ್ಛಕ್ತಿ ಒದಗಿಸುವಲ್ಲಿ ವಿಫಲವಾಗಿರುವುದಿಲ್ಲ. ರೋಸ್ಟರ್ ಪದ್ಧತಿಯನ್ನು ಅನುಸರಿಸಿ ವಿದ್ಯುಚ್ಛಕ್ತಿಯನ್ನು ಹೊಸ ಐ.ಪಿ. ಸೆಟ್‌ಗಳಿಗೆ ಕೊಡಲಾಗುತ್ತಿದೆ.

ಇ) ರಾಜ್ಯ ಸರ್ಕಾರವು ಸಾಮಾನ್ಯವಾಗಿ ನಿಗದಿ ಪಡಿಸಿರುವ 1992-93ರ ಐ.ಪಿ. ಸೆಟ್‌ನ ಗುರಿಯನ್ನು ಸಾಧಿಸಲು ಮಂಡಳಿಯು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿರುತ್ತದೆ. ಇದಕ್ಕೆ ಬೇಕಾದ ಹಲವಾರು ಪ್ರಸರಣಾ ಮಾರ್ಗ ಮತ್ತು ಸಬ್ ಸ್ಟೇಷನ್ ಕೆಲಸಗಳಲ್ಲಿ ಸುಧಾರಣೆ ಮತ್ತು ವಿಸ್ತರಣೆ ಕಾರ್ಯಕ್ರಮಗಳನ್ನು ಮಂಡಳಿಯು ಮಾಡುತ್ತಿದೆ.

ಮೂಡಬಿದರೆಯಲ್ಲಿ ತೋಟಗಾರಿಕೆಗೆ ಮಂಜೂರಾದ ಜಮೀನಿನ ವಿವರ

273 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದ್ರೆಯಲ್ಲಿ ತೋಟಗಾರಿಕೆ ಇಲಾಖೆಗೆ ಮಂಜೂರಾದ ಜಮೀನೆಷ್ಟು?

ಆ) ಇದರಲ್ಲಿ ಅಭಿವೃದ್ಧಿ ಕಾರ್ಯಗಳೇನಾದರೂ ಈ ತನಕ ಆಗಿದೆಯೇ?

ಇ) ಇತರ ಅಭಿವೃದ್ಧಿಗಾಗಿ ಯೋಜನೆ ಏನಾದರೂ ತಯಾರಾಗಿದೆಯೇ (ಆದರ ವಿವರಗಳನ್ನು ಕೊಡುವುದು)?

ಈ) ಈ ಯೋಜನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಉ) ಈ ಸ್ಥಳದಲ್ಲಿ ಅನಧಿಕೃತ ಅಕ್ರಮಣ ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು) :

ಅ) 8.20 ಎಕರೆ

ಆ) ಇಲ್ಲ

ಇ) ಹೌದು. ಸುಮಾರು 6.02 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಐದು ವರ್ಷಗಳ ಅವಧಿಯಲ್ಲಿ ಕಾರ್ಯಗತಗೊಳಿಸಲು ತಯಾರಿಸಿದೆ. ಈ ಯೋಜನೆಯಲ್ಲಿ 6 ಎಕರೆ ಪ್ರದೇಶದಲ್ಲಿ ವಿವಿಧ ಜಾತಿಯ ಹಣ್ಣಿನ ತೋಟವನ್ನು ನಿರ್ಮಿಸುವುದು. ಒಂದು ಎಕರೆ ಪ್ರದೇಶದಲ್ಲಿ ಉದ್ಯಾನವನ ನಿರ್ಮಾಣ ಮಾಡಲಾಗುವುದು. ಉಳಿದ ಪ್ರದೇಶದಲ್ಲಿ ಸಸ್ಯಾಭಿವೃದ್ಧಿ ಕಾರ್ಯಕ್ರಮ, ಕಾಮಗಾರಿ ಕೆಲಸಗಳಿಗೆ ಉಪಯೋಗಿಸಲು ಉದ್ದೇಶಿಸಲಾಗಿದೆ.

ಈ) ತೋಟಗಾರಿಕೆ ನಿರ್ದೇಶಕರು ಕಳುಹಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿದೆ.

ಉ) ಹೌದು. ಅತಿಕ್ರಮಣಕಾರರನ್ನು ನಿಯಮಾನುಸಾರ ಹೊರದೂಡಲು ಕ್ರಮ ಕೈಗೊಳ್ಳಲಾಗುವುದು.

ಸೇಡಂ ಕ್ಷೇತ್ರದ ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಂಖ್ಯೆ

292 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಪ್ರಾಥಮಿಕ ಶಾಲೆಗಳು 4ನೇ ವರ್ಗ ಹಾಗೂ 7ನೇ ವರ್ಗದವರೆವಿಗೂ ಇದ್ದು ಆ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಹಾಗೂ ಕೋಣೆಗಳ ಸಂಖ್ಯೆ ಎಷ್ಟು?*

ಆ) *ಪ್ರಾಥಮಿಕ ಶಾಲೆಗಳು 4ನೇ ವರ್ಗದಿಂದ 7ನೇ ವರ್ಗದವರೆವಿಗೂ ಇದ್ದು, ಅಲ್ಲಿ ಒಂದು ಎರಡು ಕೋಣೆಗಳು ಇದ್ದು ಒಬ್ಬಿಬ್ಬರು ಶಿಕ್ಷಕರು ಇದ್ದರೆ ಶಿಕ್ಷಣಕ್ಕಾಗಿ ಶಾಲೆಗಳು ಇದ್ದು ಸಹ ಇಲ್ಲದಂತಾಗಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಮಾಡಿದಂತಾಗಿಲ್ಲವೆ?*

ಇ) *ಈ ಹೈದ್ರಾಬಾದ್ ಕರ್ನಾಟಕ ಹಿಂದುಳಿದ ಭಾಗದಲ್ಲಿ ಕೋಣೆಗಳು ಹಾಗೂ ಶಿಕ್ಷಕರ ಕೊರತೆಯನ್ನು ಸರಿಪಡಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಯಾವಾಗ ಸುಧಾರಿಸಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ 441

ಕೋಣೆಗಳ ಸಂಖ್ಯೆ 86

ಆ) ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಆಗದಂತೆ ಅಗತ್ಯವಿರುವ ಶಾಲೆಗಳಿಗೆ ಶಿಕ್ಷಕರನ್ನು ನಿಯೋಜಿಸಲಾಗುತ್ತಿದೆ.

ಇ) ಇಲಾಖೆಯ ಮತಿಯಿಂದ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳುವ ಶಾಲಾ ಕಟ್ಟಡದ ನಿರ್ಮಾಣ ಮತ್ತು ಶಿಕ್ಷಕರ ನೇಮಕಾತಿಯಲ್ಲದೇ ಹೈದ್ರಾಬಾದ್‌ಕರ್ನಾಟಕ ಅಭಿವೃದ್ಧಿ ಯೋಜನೆಯನ್ವಯವೂ ಸಹ ಶಾಲಾ ಕೋಣೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದೆ. ವಿಶೇಷ ನೇಮಕಾತಿ ನಿಯಮಗಳಡಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹಿಂದುಳಿದ ವಿಭಾಗದ ಅಭಿವೃದ್ಧಿಗೋಸ್ಕರ ವಿಶೇಷ ಒತ್ತುಕೊಡಲು ಈ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸೇಡಂ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆ ಅಧೀನದಲ್ಲಿರುವ ಕೆರೆಗಳ ದುರಸ್ತಿ

295 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ 1989-90ನೇ ಸಾಲಿನಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆ ಅಧೀನದಲ್ಲಿರುವ ಕೆರೆಗಳ ದುರಸ್ತಿಗಾಗಿ ವಿಚಾರಿಗಿರುವ ಹಣವೆಷ್ಟು (ಕಾಮಗಾರಿವಾರು ವಿವರ ತಿಳಿಸುವುದು)*

ಆ) *ದುರಸ್ತಿ ಮಾಡಿಯೂ ಸಹ ನೀರಾವರಿ ಕೆರೆಗಳ ಕೆಲಸ ಪೂರ್ಣಗೊಂಡು ರೈತರಿಗೆ ಇದರ ಪ್ರಯೋಜನ ದೊರೆಯದೆ ಇರಲು ಕಾರಣಗಳೇನು?*

ಇ) *ಈಗಲೂ ಸಹ ಕಾನಗಡ್ಡಿ ಕೆರೆ ಕಡಲಾಪುರ ಕೆರೆ ಕಾಲುವೆ ಇತ್ಯಾದಿ ಸರಿಯಾಗಿಲ್ಲದೆ ರೈತರಿಗೆ ನೀರಾವರಿ ಬಗ್ಗೆ ತೊಂದರೆ ಉಂಟಾಗಿಲ್ಲವೆ?*

ಈ) *ಇವುಗಳನ್ನು ದುರಸ್ತಿ ಮಾಡಿ ರೈತರಿಗೆ ನೀರಾವರಿ ಅನುಕೂಲ ಮಾಡಿ ಕೊಡಲಾಗುವುದೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ರೂ. 3,70,820 ಗಳು ವಿವರಗಳು ಹೀಗಿವೆ

	89-90	*90-91*	*91-92*	*92-93*	ಒಟ್ಟು
ಕಾನಾಗಡ್ಡ ಕೆರೆ	6100	44634	133645	7400	191779